# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

**ಮುಕ್ತಗಂಗೋತ್ರಿ, ಮೈಸೂರು-570 006.**

ಸಂಖ್ಯೆ: ಕರಾಮುವಿ/ಅಸಾವಿ/01-20/2019-20 ದಿನಾಂಕ: 02-11-2019

## ದರಪಟ್ಟಿ ಆಹ್ವಾನದ ಪ್ರತಿ

**ವಿಷಯ :** ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಐ.ಎ.ಎಸ್ ಮತ್ತು ಐ.ಪಿ.ಎಸ್ ತರಬೇತಿ ಸಂಬಂಧದ ಅಧ್ಯಯನ ಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡುವ ಸಂಬಂಧ ದರಪಟ್ಟಿ ಕೋರಿ.

**ಉಲ್ಲೇಖ :** 1) ಸ್ವಪತ ಕೇಂದ್ರದ ಪತ್ರ ಸಂಖ್ಯೆ: ಕರಾಮುವಿ/ಸ್ವಪತಕೇ/2019-20, ದಿನಾಂಕ: 30-10-2019.
2) ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 02-11-2019.

* * * * * * *

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಲ್ಲಿನ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರದ ವತಿಯಿಂದ ಐ.ಎ.ಎಸ್, ಐ.ಪಿ.ಎಸ್ ಮತ್ತು ಕೆ.ಎ.ಎಸ್ ಪರೀಕ್ಷೆಗಳಿಗೆ ತರಬೇತಿ ನೀಡುತ್ತಿದ್ದು ತರಬೇತಿಯಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗು ತರಬೇತಿ ಕೇಂದ್ರದಲ್ಲಿ ಕ್ರೂಡಿಕರಿಸಿದ ಅಧ್ಯಯನ ವಿಷಯಗಳನ್ನು ಪುಸ್ತಕ ರೂಪದಲ್ಲಿ ನೀಡುವ ಸಂಬಂಧ ಸದರಿ, ಪುಸ್ತಕಗಳನ್ನು ಮುದ್ರಿಸಿ, ಸರಬರಾಜು ಮಾಡಿಕೊಳ್ಳಬೇಕಾಗಿದ್ದು, ಮುದ್ರಣವಾಗಬೇಕಾಗಿರುವ ಪುಸ್ತಕಗಳ ಪ್ರತಿಗಳು, ಒಳಪುಟಗಳು ಮತ್ತು ರಕ್ಷಾಪುಟಗಳಿಗೆ ಬಳಸಬೇಕಾದ ಕಾಗದದ Specification ಈ ಕೆಳಕಂಡಂತೆ ತಿಳಿಸಲಾಗಿದೆ. ಸದರಿ ಪುಸ್ತಕಗಳನ್ನು ಮುದ್ರಿಸಿ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕೇಂದ್ರ ಕಚೇರಿಗೆ ಸರಬರಾಜು ಮಾಡಲು ತಗಲುವ ಕನಿಷ್ಠತಮ ದರವನ್ನು (ಎಲ್ಲಾ ತೆರಿಗೆ ಸೇರಿದಂತೆ) ದರಪಟ್ಟಿ ನೀಡಲು ಕೋರಲಾಗಿದೆ.

**ಮುದ್ರಣವಾಗಬೇಕಾದ ಪುಸ್ತಕದ ವಿವರ :**

1. ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಐ.ಎ.ಎಸ್, ಐ.ಪಿ.ಎಸ್ ಮತ್ತು ಕೆ.ಎ.ಎಸ್ ತರಬೇತಿ ಅಧ್ಯಯನ ಪುಸ್ತಕದ ಅಳತೆಯು, ಡೆಮಿ 1/4 ಆಗಿರುತ್ತದೆ.
2. ಒಟ್ಟು 246 ಪುಟಗಳಿದ್ದು, ಒಳಪುಟ 60 ಜಿ.ಎಸ್.ಎಂ. ತೂಕದ ನ್ಯಾಚುರಲ್ ಶೇಡ್ ಮ್ಯಾಪ್‌ಲಿಥೋ ಕಾಗದ ಬಳಸಿ ಒಂದು ಬಣ್ಣದಲ್ಲಿ ಮುದ್ರಿಸಬೇಕಾಗುತ್ತದೆ.
3. ಪುಸ್ತಕದ ರಕ್ಷಾಪುಟಗಳಿಗೆ 170 ಜಿ.ಎಸ್.ಎಂ. ತೂಕದ ಇಂಡಿಯನ್ ಮ್ಯಾಟ್ ಆರ್ಟ್ ಕಾರ್ಡ್ ಬಳಸಿ ದ್ವಿವರ್ಣದಲ್ಲಿ ಮುದ್ರಿಸಿ ಫರ್‌ಫೆಕ್ಟ್ ಬೈಂಡಿಂಗ್ ವಿತ್ ಮ್ಯಾಟ್ ಲ್ಯಾಮಿನೇಷನ್ ಮಾಡಬೇಕಾಗುತ್ತದೆ.
4. ಈ ಮೇಲ್ಕಂಡ Specification ರೀತ್ಯಾ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಐ.ಎ.ಎಸ್, ಐ.ಪಿ.ಎಸ್ ಮತ್ತು ಕೆ.ಎ.ಎಸ್ ತರಬೇತಿ ಅಧ್ಯಯನ ಪುಸ್ತಕಗಳನ್ನು 450 ಸಂಖ್ಯೆಯಲ್ಲಿ ಮುದ್ರಿಸಿ ಸರಬರಾಜು ಮಾಡಬೇಕಾಗುತ್ತದೆ. ಈ ರೀತಿಯಲ್ಲಿ ಒಟ್ಟಾರೆ 450 ಪುಸ್ತಕಗಳನ್ನು ಮುದ್ರಿಸಿ ಕೇಂದ್ರ ಸ್ಥಾನಕ್ಕೆ ಸರಬರಾಜು ಮಾಡಲು ತಮ್ಮ ಸಂಸ್ಥೆಯ ಕನಿಷ್ಠತಮ ದರಗಳನ್ನು ತಿಳಿಸಲು (ಎಲ್ಲಾ ತೆರಿಗೆಗಳೊಂದಿಗೆ) ಕೋರಲಾಗಿದೆ.

Scanned by CamScanner

**ನಿಯಮ ಮತ್ತು ಷರತ್ತುಗಳು:**

1. ಮುದ್ರಣದ ವಿಷಯವುಳ್ಳ ಸಿ.ಡಿ. ಮತ್ತು ಡೆಮ್ಮಿಯನ್ನು ಮುದ್ರಣದ ಕಾರ್ಯಾದೇಶದೊಂದಿಗೆ ವಿ.ವಿ. ನಿಲಯದ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರವು ನೀಡುತ್ತದೆ. ಯಾವುದೇ ಬದಲಾವಣೆ ಇಲ್ಲದಂತೆ ಅಚ್ಚುಕಟ್ಟಾಗಿ ಮುದ್ರಿಸಿ ಸರಬರಾಜು ಮಾಡಬೇಕಾಗುತ್ತದೆ.
2. ಸದರಿ ಪುಸ್ತಕಗಳನ್ನು ವಿ.ವಿ. ನಿಲಯ ಸೂಚಿಸಿದ Specification ರೀತ್ಯಾ ನಿಗಧಿತ ದಿನಾಂಕದೊಳಗೆ ಮುದ್ರಿಸಿ ಸರಬರಾಜು ಮಾಡಲು ಸಿದ್ಧರಿರಬೇಕು.
3. ಈ ಪುಸ್ತಕದ ಮುದ್ರಣಕ್ಕೆ ನಿಗಧಿಪಡಿಸುವ ದರಗಳು ಕಾರ್ಯದೇಶ ಹೊರಡಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಗೆ(365 ದಿನಗಳು) ಚಾಲ್ತಿಯಲ್ಲಿರುತ್ತವೆ.
4. ಸದರಿ ದರಪಟ್ಟಿಯನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ವಿ.ವಿ ಯು ಹೊಂದಿರುತ್ತದೆ.
5. ದರಪಟ್ಟಿ ಸಲ್ಲಿಸುವ ಸಂಸ್ಥೆಗಳು ದರಪಟ್ಟಿಯಲ್ಲಿ ತಮ್ಮ ಸಂಸ್ಥೆಯ ಮೊಹರು ಮತ್ತು ಸಹಿಯನ್ನು ಕಡ್ಡಾಯವಾಗಿ ಹಾಕುವುದು, ತಪ್ಪಿದ್ದಲ್ಲಿ ದರಪಟ್ಟಿಗಳನ್ನು ತಿರಸ್ಕರಿಸಲಾಗುವುದು.
6. ವಿಶ್ವವಿದ್ಯಾನಿಲಯದಲ್ಲಿ ಮುದ್ರಣ ಕೆಲಸ ನಿರ್ವಹಿಸಲು **ಜಿ.ಎಸ್.ಟಿ** ನೊಂದಣಿದಾರರಿಗೆ ಮಾತ್ರ ಅವಕಾಶವಿರುತ್ತದೆ.
5. ದರಪಟ್ಟಿಯನ್ನು ಮೊಹರಾದ ಲಕೋಟೆಯಲ್ಲಿಟ್ಟು ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಐ.ಎ.ಎಸ್, ಐ.ಪಿ.ಎಸ್ ಮತ್ತು ಕೆ.ಎ.ಎಸ್ ತರಬೇತಿ ಅಧ್ಯಯನ ಪುಸ್ತಕದ ಸಂಬಂಧದ ದರಪಟ್ಟಿ" ಎಂಬುದಾಗಿ ಶೀರ್ಷಿಕೆಯನ್ನು ಬರೆದು ದಿನಾಂಕ: 06/11/19 ರ ಸಂಜೆ 5–00 ರೊಳಗೆ **ಕುಲಸಚಿವರು, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮುಕ್ತಗಂಗೋತ್ರಿ, ಮೈಸೂರು,** ಇವರ ಹೆಸರಿಗೆ ಖುದ್ದಾಗಿ / ಅಂಚೆ ಮೂಲಕ ಸಲ್ಲಿಸುವುದು.

**ಆದೇಶದ ಮೇರೆಗೆ**

**ಕುಲಸಚಿವ**

**ಪ್ರತಿಗಳು: –**

1. ವಿಶೇಷ ಕರ್ತವ್ಯಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ, ಕರಾಮುವಿ.
2. ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ.
3. ಹಣಕಾಸು ಅಧಿಕಾರಿಗಳು, ಕರಾಮುವಿ.
4. ನಿರ್ದೇಶಕರು, ಐ.ಟಿ. ವಿಭಾಗ, ಕರಾಮುವಿ (ಅಂತರ್‌ಜಾಲದಲ್ಲಿ ಪ್ರಕಟಿಸಲು ಮಾಹಿತಿಗಾಗಿ)
5. ಕಚೇರಿ ಪ್ರತಿ.

Scanned by CamScanner